## 18

# ಯೇಸುವಿನ ಕುರಿತ ಇನ್ನೊಂದು ದೃಷ್ಟಿ

## (ಯೋಹಾನ 16)

*"ಅದಕ್ಕೆ ಶಿಷ್ಯರು - ನೀನು ಹೇಳುವ ಸಂಗತಿಯನ್ನು ಈಗ ಗೂಢಾರ್ಥವಾಗಿ ಹೇಳದೆ ಸ್ಪಷ್ಟ ವಾಗಿ ಮಾತಾಡುತ್ತೀಯಲ್ಲಾ; ನೀನು ಸಮಸ್ತವನ್ನು ತಿಳಿದನೆಂದೂ ನಿನಗೆ ಪ್ರಶ್ನೆ ಮಾಡ ಬೇಕಾದ ಅವಶ್ಯವಿಲ್ಲವೆಂದೂ ಈಗ ತಿಳಿಯಿತು; ಇದರಿಂದ ನಿನ್ನನ್ನು ದೇವರ ಬಳಿಯಿಂದ ಬಂದವನೆಂದು ನಂಬುತ್ತೇವೆ ಅಂದದ್ದಕ್ಕೆ ಯೇಸು ಈಗ ನಂಬುತ್ತೀರೋ? ನೋಡಿರಿ, ನಿಮ್ಮಲ್ಲಿ ಒಬ್ಬೊಬ್ಬನು ತನ್ನ ತನ್ನ ಸ್ಥಳಕ್ಕೆ ಚದರಿಹೋಗಿ ನನ್ನನ್ನು ಒಂಟಿಗನಾಗಿ ಬಿಡುವ ಕಾಲ ಬರುವದು, ಈಗ ಬಂದಿದೆ ಆದರೆ ನಾನು ಒಂಟಿಗನಲ್ಲ, ತಂದೆಯು ನನ್ನ ಸಂಗಡ ಇದ್ದಾನೆ" (ವಚನಗಳು 29-32).*

ಯೇಸು ತನ್ನ ಶಿಲುಬೆಯನ್ನು ಎದುರಿಸುವ ಮೊದಲು ತನ್ನ ಅಪೋಸ್ತಲರಿಗೆ, ಇನ್ನು ಮುಂದೆ ಅವರೊಂದಿಗೆ ಗೂಢವಾಗಿ ಮಾತನಾಡುವದಿಲ್ಲ ಅಂದನು. ಅಂದರೆ ಅವರಿಗೆ ಅರ್ಥವಾಗದ ರೀತಿಯಲ್ಲಿ ಸಾಮ್ಯರೂಪದಲ್ಲಿ ಮಾತನಾಡುವದಿಲ್ಲ ಎಂಬದೇ. ಮುಂದೆ ಸಂಭವಿಸಬೇಕಿದ್ದ ಸಂಗತಿಯು ನೆರವೇರುವ ಸಮಯವು ಬಂದ ಕಾರಣ, ಯೇಸು ಅವ ರೊಂದಿಗೆ ನೇರವಾಗಿ ಮಾತನಾಡಿದನು. ಯೇಸುವಿನ ಮರಣದ ಪರಿಣಾಮವನ್ನು ಅವರು ಎದುರಿಸಬೇಕಿದದ್ದರಿಂದ, ಯೇಸು ಅವರೊಡನೆ ಸರಳವಾಗಿ ಮಾತನಾಡಬೇಕಾಯಿತು.

ಈ ಸರಳವಾದ ಮಾತಿನ ನಿಮಿತ್ತವಾಗಿ, ಆತನೆಂದಿಗೂ ತನ್ನ ಅಪೊಸ್ತಲರೊಂದಿಗೆ ಈ ವಿಧವಾಗಿ ಮಾತನಾಡುವದಿಲ್ಲ ಎಂಬ ಅರ್ಥವಲ್ಲ. ಆತನ ವಾಗ್ದಾನದಲ್ಲಿ ಆ ಸಮಯದಲ್ಲಿನ ಕಾರ್ಯಮಾತ್ರ ಒಳಗೊಂಡಿರದೆ, ಪವಿತ್ರಾತ್ಮನು ಹೇಳುವ ಮಾತುಗಳು ಸಹ ಒಳಗೊಂಡಿದ್ದವು. ಯೇಸುವಿನ ಮಾತುಗಳ ನೆನಪು ಹಾಗೂ ಪ್ರಕಟನೆಯನ್ನು ಆತ್ಮನು ತಂದಾಗ, ಅವರು ಸತ್ಯವನ್ನು ಹಾಗೂ ದೇವರ ಮುಂದಿನ ಯೋಜನೆಯನ್ನು ಅರಿಯುವ ಸಾಮರ್ಥ್ಯ ಹೊಂದಿದರು.

ಯೇಸುವಿನ ಈ ಚರ್ಚೆಯಲ್ಲಿ ಸರಳತೆಯನ್ನು ಅಪೊಸ್ತಲರು ಗಮನಿಸಿದರು, "ನೀನು ಹೇಳುವ ಸಂಗತಿಯನ್ನು ಈಗ ಗೂಢಾರ್ಥವಾಗಿ ಹೇಳದೆ ಸ್ಪಷ್ಟವಾಗಿ ಮಾತಾಡುತ್ತೀಯಲ್ಲಾ ನೀನು ಸಮಸ್ತವನ್ನು ತಿಳಿದವನೆಂದು ನಿನಗೆ ಪ್ರಶ್ನೆ ಮಾಡಬೇಕಾದ ಅವಶ್ಯವಿಲ್ಲವೆಂದು ಈಗ ತಿಳಿಯಿತು; ಇದರಿಂದ ನಿನ್ನನ್ನು ದೇವರ ಬಳಿಯಿಂದ ಬಂದವನೆಂದು ನಂಬುತ್ತೇವೆ ಅಂದರು" (16:29). ಯೇಸು ಅವರಿಗೆ ತಿಳಿಸಿದ ಸಂಗತಿಗಳು ಸತ್ಯ ಮತ್ತು ಪರಿಪೂರ್ಣ ವಾದವು ಎಂದು ಅವರು ಗ್ರಹಿಸಿದರು. ಆತನು ಈಗ ತಾನೇ ಮಾತನಾಡಿದ ಸಂಗತಿಯ ವಿವರಣೆಯನ್ನು ಅವರುಗಳು ಕೇಳಲಿಲ್ಲ. ಅಪೊಸ್ತಲರಿಗೆ ಇದು ಯೇಸುವಿನ ದೈವಿಕತೆ ಎಂದು ಮನನವಾಯಿತು.

ಯೇಸು ಈಗ ತಾನು ಮಾಡಲಿದ್ದ ಕಾರ್ಯಗಳಿಗಾಗಿ, ಹಾಗೂ ಆತನು ತಂದೆಯಿಂದ ಬಂದವನು ಎಂಬ ವಿಚಾರದಲ್ಲಿ ಅವರ ಅರಿಕೆ ಏನು ಎಂದು ತಿಳಿಯಲು ಅಪೇಕ್ಷಿಸಿದನು, ನೀವು ನನ್ನನ್ನು ನಂಬುವಿರಾ? ಹೌದು ಅವರುಗಳು ಅರಿಯಬೇಕಿದ್ದ ಇನ್ನು ಅನೇಕ ವಿಚಾರಗಳಿದದವು. ಅವರು ಎದುರಿಸಲಿರುವ ಸಂಗತಿಯನ್ನು ಸಹಿಸಿಕೊಳ್ಳಲು ಅವರ ನಂಬಿಕೆಯು ಬಲವಾಗಿರಲಿಲ್ಲ. ಅವರ ನಂಬಿಕೆ ಹಾಗೂ ತಿಳುವಳಿಕೆ ಬಲಹೀನವಾಗಿದ್ದರಿಂದ,

ಅವರು ಅನೇಕ ಪರೀಕ್ಷೆಗಳಿಗೆ ಒಳಪಡಬೇಕಿತ್ತು.

ನಾವುಗಳು ಸಂತೋಷವಾಗಿರಬೇಕು ಎಂಬ ವಿಚಾರವನ್ನು ಯೇಸುವಿನ ಚರ್ಚೆಯ ಮೂಲಕ ಅರಿಯುತ್ತೇವೆ. ಇದರಲ್ಲಿ ನಾವು ಏನನ್ನು ಗಮನಿಸುತ್ತೇವೆ.

## ಆತನು ನೇರವಾಗಿ ಮಾತನಾಡಿದನು

*ನಮ್ಮ ಯೇಸುವು ದೈವೀಕ ರಕ್ಷಕನಾಗಿ ನಮ್ಮೊಂದಿಗೆ ನೇರವಾಗಿ ಮಾತನಾಡುತ್ತಾನೆ.* ಯೇಸು ನಿರಂತರವಾಗಿ ಬೋಧಿಸುವ ಕ್ರಿಸ್ತನೇ. ಆತನು ತನ್ನ ಅಪೊಸ್ತಲರಿಗೆ, "ಆದರೆ ಇನ್ನು ಮೇಲೆ ಸಾಮ್ಯರೂಪವಾಗಿ ನಿಮ್ಮ ಸಂಗಡ ಮಾತಾಡುವದಿಲ್ಲ" ಅಂದನು (16:25). ಅವರುಗಳು ಮುಂದೆ ಅನುಭವಿಸಲಿಕ್ಕಿದ್ದ ಸಂಗತಿಗಳ ಕುರಿತು ಅವರಿಗೆ ಸೌಮ್ಯ ರೂಪದಲ್ಲಿ ಮನವರಿಕೆ ಮಾಡುತ್ತಿದ್ದನು. ಈ ಹಿಂದೆ ಅವರು ಅರ್ಥಮಾಡಿಕೊಳ್ಳಲು ಶಕ್ತವಾದ ಸಂಗತಿಗಳನ್ನು ಮಾತ್ರ ಸಾಮ್ಯರೂಪದಲ್ಲಿ ಹೇಳುತ್ತಿದ್ದನು, ಆದರೆ ಈಗ ಪರಿಸ್ಥಿತಿಯು ಬದಲಾದ ಕಾರಣ ಅವರಿಗೆ ಹೆಚ್ಚಿನ ಸಂಗತಿಗಳನ್ನು ಹೇಳಲು ಮುಂದಾದನು.

ಉಪದೇಶ ಮಾಡುವದೇ ಯೇಸುವಿನ ಮುಖ್ಯಸೇವೆಯಾಗಿತ್ತು. ಪರಲೋಕದ ಸಮಾಚಾರವನ್ನು ಪಟ್ಟಣದಿಂದ ಪಟ್ಟಣಕ್ಕೆ ಸಾರಿದನು. ಮೂರು ವರ್ಷಗಳ ಕಾಲ ತನ್ನ ಅಪೊಸ್ತಲರೊಂದಿಗೆ ಇದ್ದನು. "ಶಿಷ್ಯನು" ಅಂದರೆ "ಕಲಿಯುವವನು" ಎಂಬ ಅರ್ಥ. ಕ್ರಿಸ್ತನ ವಿದ್ಯಾರ್ಥಿ ಎಂಬುದು ವಾಕ್ಯದ ಅರ್ಥವಾಗಿದೆ. ಅವನು ಪ್ರತಿನಿತ್ಯವು ಕಲಿತು ವೃದ್ಧಿಯಾಗುವನು. ಯೇಸುವಿನ ಶಿಷ್ಯರು ಶೀಘ್ರವಾಗಿ ಕಲಿಯದೆ ಹೋದರೂ, ಕರ್ತನು ಅವರನ್ನು ಉಪದೇಶಿ ಸುತ್ತಲೇ ಇದ್ದನು. ಆತನು ನಮಗೂ ಅದನ್ನೇ ಮಾಡುತ್ತಾನೆ. ನಾವು ನಿಧಾನಗತಿಯಲ್ಲಿ ಕಲಿಯುವವರಾದರೆ, ಯೇಸು ತಾನು ಉಪದೇಶಿಸುವದನ್ನು ಮುಂದುವರೆಸುತ್ತಾನೆ. ನಮ್ಮ ರಕ್ಷಣೆಯು ಪರಿಪೂರ್ಣತೆಯನ್ನು ಅವಲಂಭಿಸಿರುತ್ತದೆಯೇ? ಇಲ್ಲ, ಯೇಸುವನ್ನು ಸತ್ಯದಿಂದಲೂ, ನಂಬಿಕೆಯಿಂದಲೂ ಅನುಸರಿಸುವದರಿಂದ ಉಂಟಾಗುತ್ತದೆ.

## ಆತನು ಸಹನೆಯಿಂದ ಕಾಯುತ್ತಾನೆ

*ಎರಡನೆಯದಾಗಿ, ಯೇಸು ನಮ್ಮ ಧೈವೀಕ ರಕ್ಷಕನಾಗಿ ಸಹನೆಯಿಂದ ಕಾಯುತ್ತಾನೆ:* ಆತನು ಯಾವಾಗಲು ಕಾಯುವ ಕ್ರಿಸ್ತನೇ. ಯೇಸು ಅಪೊಸ್ತಲರಿಗೆ, "... ಈಗ ನೀವು ನಂಬುತ್ತೀರೋ? ಎಂದು ಕೇಳಿದನು" (16:31). ಯೇಸುವಿನ ಮರಣವನ್ನು ಅವರು ನೋಡು ವಾಗ, ಅವರಲ್ಲಿ ಮಹಾಭಯವು ಉಂಟಾಗುವದೆಂದು ಆತನು ಅರಿತಿದ್ದನು. ಆದ್ದರಿಂದ ಆತನು "ನೋಡಿರಿ ನಿಮ್ಮಲ್ಲಿ ಒಬ್ಬೊಬನು ತನ್ನ ತನ್ನ ಸ್ಥಳಕ್ಕೆ ಚದರಿಹೋಗಿ ನನ್ನನ್ನು ಒಂಟಿಗನಾಗಿ ಬಿಡುವ ಕಾಲ ಬರುವದು ಈಗ ಬಂದಿದೆ" ಅಂದನು (16:32).

ಪ್ರೇಕ್ಷಕರಾದ ನಾವುಗಳು, ಅಪೊಸ್ತಲರ ಬಗ್ಗೆ ಯೇಸು ಸಹನೆ ಕಳಕೊಳ್ಳುವನು ಎಂದು ಭಾವಿಸಬಹುದು. ಏಕೆಂದರೆ ಕೇವಲ ಮೂರು ವರ್ಷಗಳ ಕಾಲ ಅವರು ನಂಬುವಂತೆ ಯೇಸು ಬೋಧನೆಯನ್ನು ಅವರಿಗೆ ಮಾಡಿದ್ದನು. ಅದಾಗ್ಯೂ, ಆತನು ಮಹತ್ತರವಾಗಿ ತನ್ನನ್ನು ತೋರ್ಪಡಿಸಿಕೊಳ್ಳುವ ಸಮಯವು ಬರುತ್ತದೆ. ಅದು ಆತನ ಮಹಾ ಸಂಕಟ ದಿನ - ತಾನು ಯಾವ ಅಪೊಸ್ತಲರೊಂದಿಗೆ ತನ್ನ ಅಮೂಲ್ಯವಾದ ಸಮಯವನ್ನು ಕಳೆದಿದ್ದನೋ, ಅವರೆಲ್ಲರು ಚದರಿ ಹೋಗುವ ಸಮಯವಾಗಿತ್ತು.

ಈ ಚಿತ್ರಣದ ಮೂಲಕವಾಗಿ, ನಾವುಗಳು ಆತನನ್ನು ಆಳವಾಗಿ ಅರಿತು, ಆತನನ್ನು ನಂಬುವವರೆಗೆ, ಆತನು ಸಹನೆಯಿಂದ ಇರುತ್ತಾನೆ ಎಂದು ಗಮನಿಸುತ್ತೇವೆ. ಪೇತ್ರನು ಆತನನ್ನು ಅರಿಯೆನೆಂದು ಹೇಳಿದ ನಂತರವು ಯೇಸು ಅವನನ್ನು ಕ್ಷಮಿಸಿ ಅವನನ್ನು ಅಂಗೀಕರಿಸಿದನು, ಹಾಗೆಯೇ ಇತರೆ ಶಿಷ್ಯರನ್ನೂ ಸಹ ಕ್ಷಮಿಸಿ ಅಂಗೀಕರಿಸಿಕೊಂಡೆನು, ಯಾಕೆಂದರೆ ಅವರು ಸಹ ಆತನನ್ನು ತೊರೆದು ಹೋಗಿದ್ದರು.

ಅವರಿಗೆ ಆತನು ಏನು ಮಾಡಿರುವನೋ, ಅದನ್ನೇ ನಮಗೂ ಮಾಡುತ್ತಾನೆ. ಆದರೆ ನಮ್ಮ ಮಾನಸಾಂತರವಿಲ್ಲದ ಜೀವಿತಗಳೇ ನಮ್ಮನ್ನು ಯೇಸುವಿನ ಮತ್ತು ಆತನು ನೀಡುವ ರಕ್ಷಣೆಗೆ ಅಡಚಣೆಯಾಗಿರುತ್ತದೆ. ನಾವು ಯೂದನನ್ನು ನೆನಪು ಮಾಡಲೇಬೇಕು. ಅವನು ಮಾನಸಾಂತರ ಪಡಲಿಲ್ಲ. ಮಾನಸಾಂತರವಿಲ್ಲದವನು, ನಿರೀಕ್ಷೆಯನ್ನು ಕಳಕೊಂಡಿದ್ದಾನೆ. ಯೂದನು ತನ್ನ ಕಥೆಯನ್ನು ತಾನೇ ನಿರ್ಮಿಸಿಕೊಂಡನು, ಆದ್ದರಿಂದ ಫಲವಿಲ್ಲದ ಅಂತ್ಯವನ್ನು ಹೊಂದಿದನು. ಮಾನಸಾಂತರಪಡುವವನು ಕ್ರಿಸ್ತನಲ್ಲಿರುವ ನಿತ್ಯವಾದ ಜೀವಿತಕ್ಕೆ ಸೇರುವನು.

## ಆತನು ಸೋಲದೆ ಮುನ್ನೆಡುಸುತ್ತಾನೆ

*ಮೂರನೆಯದಾಗಿ ನಮ್ಮ ದೈವೀಕ ರಕ್ಷಕನಾದ ಯೇಸು ನಮ್ಮನ್ನು ಹಿಂಬಾಲಿಸುತ್ತಾನೆ.* ಯೇಸು ನಂಬಿಗಸ್ತನಾದ ಕ್ರಿಸ್ತನಾಗಿರುವನು. ಹೌದು ಆತನ ಶಿಷ್ಯರು ಆತನನ್ನು ತೊರೆದು ಹೋಗುವವರು, ಮತ್ತು ಆತನನ್ನು ಒಂಟಿಗನನ್ನಾಗಿ ಬಿಡುವರು ಎಂದು ತಿಳಿದರೂ, "ನಾನು ಒಂಟಿಗನಲ್ಲ; ತಂದೆಯು ನನ್ನ ಸಂಗಡ ಇದ್ದಾನೆ" ಅಂದನು (16:32). ಆತನ ಹತ್ತಿರದ ಸಹಚರರು ಸುರಕ್ಷೆಗಾಗಿ ಆತನನ್ನು ತೊರೆದು ಹೋದರೂ, ಆತನಿಗೆ ನೇಮಕವಾದ ಯೋಜನೆಯನ್ನು ತಾನು ನೆರವೇರಿಸಲು ಮುಂದಾದನು. ಆತನ ಸಕಲ ಕಾರ್ಯಗಳಲ್ಲಿ ತಂದೆಯ ಆತನೊಂದಿಗಿದ್ದನು. ಹೇಗಿದ್ದರೂ ಪಾಪಕ್ಕಾಗಿ ಯೇಸು ತನ್ನನ್ನು ಯಜ್ಞವನ್ನಾಗಿ ಅರ್ಪಿಸುವ ಸಮಯದಲ್ಲಿ ಮಾತ್ರ ತಂದೆಯು ಆತನೊಂದಿಗಿರಲಿಲ್ಲ; ಯೇಸು ಒಬ್ಬನೇ ಅದನ್ನು ಮಾಡಬೇಕಾಯಿತು. ಶಿಲುಬೆಯ ಮೇಲೆ ಯೇಸು ನಮ್ಮ ಪಾಪಗಳನ್ನು ಹೊತ್ತುಕೊಳ್ಳುವಾಗ, ತಂದೆಯು ಮಗನಿಂದ ದೂರವಾದನು (2 ಕೊರಿಂಥ 5:21). ಯೇಸು ತಂದೆಯ ಯೋಜನೆಯನ್ನು ಒಪ್ಪಿಕೊಂಡು ಅದನ್ನು ಈಡೇರಿಸಲು ಹಿಂಜರಿಯಲಿಲ್ಲ ಆ ಕಾರ್ಯಕ್ಕೆ ಆತನಿಗೆ ಯಾರ ಸಹಾಯವೂ ಅಗತ್ಯವಿರಲಿಲ್ಲ.

ನಮಗಾಗಿ ಕ್ರಿಸ್ತನು ಶಿಲುಬೆಗೆ ಹೋಗಲು ಯಾವುದೇ ಕಾರ್ಯಗಳು ಅಡ್ಡಿಮಾಡಲಾಗಲಿಲ್ಲ. ಆತನು ಯೆರೂಸಲೇಮಿಗೆ ಹೋಗಿ ಶಿಲುಬೆಯನ್ನು ಎದುರಿಸಲು ಸಜ್ಜಾಗಿದ್ದನು. ಆತನನ್ನು ನಂಬುವವರ ಹಿತಕ್ಕಾಗಿ ಇದೆಲ್ಲವನ್ನು ಮಾಡಲು, ಆತನು ಸಿದ್ಧನಾಗಿದ್ದನು.

## ಮುಕ್ತಾಯ

ಯಾವ ವಿಧವಾದ ರಕ್ಷಕನನ್ನು ನಾವುಗಳು ಹೊಂದಿದ್ದೇವೆ? ನಾವು ಭವಿಷ್ಯವನ್ನು ಎದರಿಸುವಂತೆ, ನಮಗೆ ಸರಳವಾಗಿ ಬೋಧಿಸುವ ರಕ್ಷಕನು ನಮಗಿದ್ದಾನೆ. ನಾವುಗಳು ಆಳವಾದ ತಿಳುವಳಿಕೆಯನ್ನು ಹೊಂದಿ, ನಂಬಿಕೆಯನ್ನು ಹೊಂದುವಂತೆ ಸಹನೆವುಳ್ಳವನು ಆತನಾಗಿದ್ದಾನೆ. ನಮ್ಮ ರಕ್ಷಣೆಗಾಗಿ ಸಕಲ ಅಪಾಯ ಹಾಗೂ ವೇದನೆಯನ್ನು ಹೊಂದಿದವನು ಆತನೇ. ನಾವು ಆತನನ್ನು ತೊರೆದರು, ಆತನು ನಮ್ಮನ್ನು ತಿರಸ್ಕರಿಸುವದಿಲ್ಲ. ನಾವು ಅಸಾಹಯಕರಾಗಿರುವಾಗ ಆತನು ಒತ್ತಾಯಿಸುವದಿಲ್ಲ. ಆತನ ಸಂಗಡ ಯಾರೂ ಇಲ್ಲದಿದ್ದರೂ ಈ ವಿಶೇಷವಾದ ರಕ್ಷಣೆಯ ಯೋಜನೆಯನ್ನು ಮುಂದುವರೆಸಿದನು. ಆತನು ನಮಗೆ ಬೋಧಿಸಿ ಸಹನೆಯಿಂದಿರುವನು, ತಡಮಾಡದೆ ನಮ್ಮನ್ನು ನಿತ್ಯಜೀವಕ್ಕೆ ನಡೆಸುವನು. ಸಾರಾಂಶವೇನೆಂದರೆ ಸರಳವಾಗಿ ಮಾತನಾಡುವ ನಮ್ಮೊದಿಗೆ ವೇದನೆಪಡುವ ಹಾಗೂ ನಿತ್ಯತ್ವಕ್ಕೆ ನಡೆಸುವ ರಕ್ಷಕನು ನಮಗಿದ್ದಾನೆ.

*"ನಿಮ್ಮಲ್ಲಿ ಒಬ್ಬೊಬ್ಬನು ತನ್ನತನ್ನ ಸ್ಥಳಕ್ಕೆ ಚದರಿಹೋಗಿ ನನ್ನನ್ನು ಒಂಟಿಗನಾಗಿ ಬಿಡುವ ಕಾಲ ಬರುವದು, ಈಗ ಬಂದಿದೆ. ಆದರೆ ನಾನು ಒಂಟಿಗನಲ್ಲ, ತಂದೆಯು ನನ್ನ ಸಂಗಡ ಇದ್ದಾನೆ" (ಯೋಹಾನ 16:32).*

*“ಆಗ ಶಿಷ್ಯರೆಲ್ಲರೂ ಆತನನ್ನು ಬಿಟ್ಟು ಓಡಿಹೋದರು” (ಮಾರ್ಕ 14:50).*

*“ಸುಮಾರು ಮೂರು ಘಂಟೆಗೆ ಯೇಸು ಏಲೀ, ಏಲೀ, ಲಮಾ ಸಬಕ್ತಾನೀ, ಅಂದರೆ ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ ಎಂದು ಮಹಾಧ್ವನಿಯಿಂದ ಕೂಗಿದನು” (ಮತ್ತಾಯ 27:46).*